

ಕೇರಳದ ಪಟನಮ್‌ತಿಟ್ಟ ಬಳಿ ರಣ್ಣಿ ಎಂಬ ಪುಟ್ಟ ಹಳ್ಳಿ. ಅಲ್ಲಿನ ನಿವಾಸಿಗಳಾದ 93 ವರ್ಷದ ಅಬ್ರಹಾಂ ಮತ್ತು 88 ವರ್ಷದ ಮರಿಯಮ್ಮ ದಂಪತಿಗೆ ಕೊರೊನಾ ಸೋಂಕು ತಗುಲಿದಾಗ ಎಲ್ಲರ ಮುಖದಲ್ಲಿ ಆತಂಕ. ಚೀನಾದಲ್ಲಿ ನಡೆದ ಕೊರೊನಾ ತಾಂಡವವನ್ನು ಮಾಧ್ಯಮಗಳ ಮೂಲಕವಷ್ಟೇ ತಿಳಿದಿದ್ದ ದಿನಗಳವು. ಆ ಸೋಂಕು ರೋಗಕ್ಕೆ ಚಿಕಿತ್ಸೆ ಹೇಗೆ ಮಾಡಬೇಕು ಎಂಬ ಬಗ್ಗೆ ಹೆಚ್ಚಿನ ಮಾಹಿತಿಯೂ ಇರಲಿಲ್ಲ. ಚಿಕಿತ್ಸೆ ನೀಡುವವರು ವೈರಸ್‌ನಿಂದ ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳಬಹುದು ಎಂಬ ಮಾಹಿತಿಯೂ ಅತ್ಯಂತ ಕಡಿಮೆಯಿತ್ತು. ಇಂಥ ಸಂದರ್ಭದಲ್ಲಿ ಅಬ್ರಹಾಂ–ಮರಿಯಮ್ಮ ಹಿರಿಯ ದಂಪತಿಯನ್ನು ಆಸ್ಪತ್ರೆ ಸಿಬ್ಬಂದಿ ಅತ್ಯಂತ ಕಾಳಜಿಯಿಂದ ನೋಡಿಕೊಂಡರು. ಅವರ ಪ್ರೀತಿಯ ಫಲವೆಂಬಂತೆ, ಆ ಹಿರಿಯ ದಂಪತಿ ಕೊರೊನಾ ಗೆದ್ದು ಬಂದರು; ‘ಕೋವಿಡ್ 19’ ಸೋಂಕನ್ನು ಗೆದ್ದ ದೇಶದ ಹಿರಿಯ ದಂಪತಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾದರು. ವಿಪರ್ಯಾಸ ನೋಡಿ; ಅವರ ಶುಶ್ರೂಷೆ ಮಾಡಿದ ನರ್ಸ್ ರೇಷ್ಮಾ ಮೋಹನ್‌ದಾಸ್ ಅವರಿಗೆ ಅದೃಷ್ಟ ಕೈಕೊಟ್ಟಿತು. ಮಾರ್ಚ್ 12ರಂದು ಆಸ್ಪತ್ರೆಗೆ ದಾಖಲಾದ ಅಬ್ರಹಾಂ ಮತ್ತು ಮರಿಯಮ್ಮ ದಂಪತಿಯನ್ನು ರೇಷ್ಮಾ ಅವರು ಮಾಸ್ಕ್ ಇಲ್ಲದೆಯೇ ಉಪಚರಿಸಿದ್ದರು. ಮಾರ್ಚ್ 23ಕ್ಕೆ ಅವರಲ್ಲಿ ಸೋಂಕು ಪತ್ತೆಯಾಗಿತ್ತು.

‘ಕೋವಿಡ್ 19’ ಸೋಂಕು ತಗುಲಿತೆಂದು ರೇಷ್ಮಾ ಅವರು ಕಂಗೆಡಲಿಲ್ಲ. ಸೋಂಕಿನ ವಿರುದ್ಧ ಹೋರಾಡಲು ಏಕಾಂತವಾಸ ‘ಕ್ವಾರಂಟೈನ್’ಗೆ ತೆರಳುವ ಮುನ್ನ ಅವರು ದಿಟ್ಟತನದಿಂದ ಹೇಳಿದರು: ‘ಈ ಸೋಂಕನ್ನು ಗೆದ್ದು ಬರುತ್ತೇನೆ. ನನ್ನ ಕರ್ತವ್ಯಕ್ಕೆ ಮರಳುತ್ತೇನೆ. ಇದು ನನ್ನ ಚಾಲೆಂಜ್’. ಈ ಮಾತುಗಳನ್ನವರು ತಮ್ಮ ವಾಟ್ಸ್‌ಆ್ಯಪ್ ಗ್ರೂಪಿನಲ್ಲಿ ಹಂಚಿಕೊಂಡಿದ್ದರು.

ರೇಷ್ಮಾ ಮೋಹನ್‌ದಾಸ್ ಅವರೀಗ ಮತ್ತೆ ಆಸ್ಪತ್ರೆಯಲ್ಲಿ ಶುಶ್ರೂಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಕೌಶಲ್ಯ, ವೃತ್ತಿಪರತೆ, ಧೈರ್ಯ ಮತ್ತು ಸಕಾರಾತ್ಮಕ ಮನೋಭಾವವನ್ನು ಕಂಡು ಕೇರಳದ ಆರೋಗ್ಯ ಸಚಿವೆ ಕೆ.ಕೆ. ಶೈಲಜಾ ಅವರು ವೈಯಕ್ತಿಕ ಕರೆ ಮಾಡಿ ಶ್ಲಾಘಿಸಿದ್ದಾರೆ.

ಶುಶ್ರೂಷಕಿಯರೆಂದರೆ ತಕ್ಷಣ ನೆನಪಾಗುವುದು ಸಕಾರಾತ್ಮಕ ಭಾವನೆ ಹಾಗೂ ಕಾಳಜಿ ಬೆರೆತ ಅಕ್ಕರೆಯ ಸೇವೆ. ಹೇಳಿಕೇಳಿ ಇದು ಹೆಣ್ಣುಮಕ್ಕಳ ಕ್ಷೇತ್ರ. ಆರೋಗ್ಯ ಶುಶ್ರೂಷೆಯ ಕ್ಷೇತ್ರದಲ್ಲಿ ಶೇ. 90ರಷ್ಟು ಮಹಿಳೆಯರೇ ಕೆಲಸ ಮಾಡುತ್ತಾರೆ. ಸಹನೆ ಹಾಗೂ ಮಾತೃತ್ವದ ಗುಣ ಸಹಜವಾಗಿ ಅವರಲ್ಲಿರುವುದೂ ಇದಕ್ಕೆ ಕಾರಣವಿರಬಹುದು. ಅನಾರೋಗ್ಯದಿಂದ ಆಸ್ಪತ್ರೆ ಸೇರಿ, ನೋವು ತಾಳದೆ ಬೊಬ್ಬಿಡುವ, ಚೀರಾಡುವ ರೋಗಿಯನ್ನೂ ತುಂಬಾ ಸಮಾಧಾನಚಿತ್ತದಿಂದ ಮಾತನಾಡಿಸಿ, ಅವರ ಸಮಸ್ಯೆಯನ್ನು ಆಲಿಸಿ, ಅವರಲ್ಲಿ ವಿಶ್ವಾಸವನ್ನು ತುಂಬುವ ಶುಶ್ರೂಷಕಿಯರತ್ತ ಇಂದು ಇಡೀ ಜಗತ್ತೇ ಮುಖ ಮಾಡಿ ನಿಂತಿದೆ. ಕೊರೊನಾ ಎಂಬ ಸೋಂಕು, ಕೆಟ್ಟ ಮಾಯೆಯಂತೆ ಜಗತ್ತನ್ನೇ ಕಂಗಾಲಾಗಿಸಿ ಕುಳಿತಿರುವಾಗ, ಒಂದೆಡೆ ಕ್ವಾರಂಟೈನ್, ಮತ್ತೊಂದೆಡೆ ಐಸೊಲೇಶನ್ ಚಿಕಿತ್ಸೆ, ಮಗದೊಂದೆಡೆ ಭೌತಿಕ ಅಂತರ ಎಂಬೆಲ್ಲ ಕಟ್ಟುಪಾಡುಗಳ ನಡುವೆ ಇಡೀ ಜಗತ್ತಿನ ಆರೋಗ್ಯ ಕ್ಷೇತ್ರದ ರಕ್ತಕಣಗಳಂತೆ ಶುಶ್ರೂಷಕಿಯರು ಅಥವಾ ನರ್ಸ್‌ಗಳು ಕೆಲಸ ಮಾಡುತ್ತಿದ್ದಾರೆ. ಪರಿಸ್ಥಿತಿ ಎಷ್ಟೇ ಪ್ರತಿಕೂಲವಾಗಿದ್ದರೂ, ಮಾನವೀಯತೆಯನ್ನೇ ಧ್ಯೇಯವನ್ನಾಗಿಸಿಕೊಂಡು ಕೆಲಸ ಮಾಡುವ ಕಾರಣದಿಂದಲೇ ಶುಶ್ರೂಷಕಿಯರು ಸಮಾಜದ ಕಣ್ಣಿಗೆ ದೀಪಧಾರಿಣಿಯರಂತೆ ಕಾಣಿಸುತ್ತಿದ್ದಾರೆ.

ಬಹಳ ಹಿಂದೇನೂ ಅಲ್ಲ. 2017ರಲ್ಲಿ ಕೇರಳಕ್ಕೆ ನಿಫಾ ವೈರಸ್ ದಾಳಿ ಇಟ್ಟಿತ್ತು. ಕೋವಿಡ್‌ಗಿಂತ ಕಡಿಮೆ ಹಾನಿಕಾರಕವಲ್ಲದ ಮಾರಕ ವೈರಸ್ ಅದು. ಆ ವೈರಸ್‌ನ ಗುಣಲಕ್ಷಣ, ಕಾಯಿಲೆಯ ಸ್ವರೂಪದ ಅರಿವಾಗುವ ಮುನ್ನವೇ ಕೋಳಿಕ್ಕೋಡ್‌ನ ಪೆರಂಬ್ರ ಎಂಬಲ್ಲಿ ‘ಇಎಂಎಸ್ ಮೆಮೋರಿಯಲ್ ಸಹಕಾರಿ ಆಸ್ಪತ್ರೆ’ಯಲ್ಲಿ ನಿಫಾ ಸೋಂಕಿತ ಮೊದಲ ರೋಗಿ ಮೊಹಮ್ಮದ್ ಸಾದಿಕ್ ದಾಖಲಾಗಿದ್ದರು. ಅವರನ್ನು ಆರೈಕೆ ಮಾಡಿದವರು ಅಲ್ಲಿನ ನರ್ಸ್ ಲಿನಿ. ಸೋಂಕಿತ ವ್ಯಕ್ತಿಗೆ ನಿಸ್ವಾರ್ಥ ಸೇವೆ ಮಾಡಿದ ಲಿನಿ ಅವರಿಗೂ ನಿಫಾ ವೈರಸ್ ಅಂಟಿಕೊಂಡಿತು. ಸಾದಿಕ್ ಅವರು ಸೋಂಕಿಗೆ ಬಲಿಯಾದರು. ಶುಶ್ರೂಷೆ ಮಾಡಿದ ಲಿನಿ ಅವರೂ ಉಳಿಯಲಿಲ್ಲ. ಅವರ ಸೇವೆಯನ್ನು ಪರಿಗಣಿಸಿ, 2017ರ ಸಾಲಿನ ರಾಷ್ಟ್ರೀಯ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಗಿದೆ. ನರ್ಸಿಂಗ್ ಕ್ಷೇತ್ರಕ್ಕೆ ಶಿಸ್ತನ್ನು ತಂದುಕೊಟ್ಟ ಬ್ರಿಟಿಷ್ ಮಹಿಳೆ ಫ್ಲಾರೆನ್ಸ್ ನೈಟಿಂಗೇಲ್ ಹೆಸರಿನಲ್ಲಿ ಈ ಪ್ರಶಸ್ತಿಯನ್ನು 1973ರಲ್ಲಿ ಸ್ಥಾಪಿಸಲಾಗಿದೆ.

## ಶುಶ್ರೂಷೆಯ ಮೊದಲ ದಿನಗಳು

ಶುಶ್ರೂಷೆ, ಆರೈಕೆ ಎಂಬ ಪರಿಕಲ್ಪನೆ ಅನಾದಿ ಕಾಲದಿಂದಲೂ ಮಾನವ ಸಮಾಜದಲ್ಲಿ ಇದ್ದರೂ ಅದರ ಸಾಂಸ್ಥಿಕ ಅಗತ್ಯ ಹೆಚ್ಚಾಗಿ ಗೋಚರಿಸಿದ್ದು ಮಹಾಯುದ್ಧಗಳ ಕಾಲದಲ್ಲಿ. ತೀವ್ರವಾಗಿ ಗಾಯಗೊಂಡ ಸೈನಿಕರನ್ನು ಯುದ್ಧಭೂಮಿಯಲ್ಲಿಯೇ ಬಿಟ್ಟುಹೋಗುತ್ತಿದ ದಿನಗಳವು. ಸೇನಾ ನೆಲೆಗಳಲ್ಲಿ ಗಾಯಗೊಂಡ ಅಥವಾ ಅನಾರೋಗ್ಯ ಪೀಡಿತ ಸೈನಿಕನನ್ನು ಕಾಳಜಿ ಮಾಡುವುದು ಕಷ್ಟವಾದಾಗ, ಅಂಥವರನ್ನು ಸಮುದ್ರಕ್ಕೆ ಎಸೆಯಲಾಗುತ್ತಿತ್ತು.

ಸೈನಿಕರ ಕ್ಯಾಂಪ್‌ಗಳಲ್ಲಿ ಒಬ್ಬರೋ ಇಬ್ಬರೋ ಶುಶ್ರೂಷಕರಷ್ಟೇ ಇರುತ್ತಿದ್ದರು. ಪುರುಷರು ಮಾತ್ರ ಕೆಲಸ ಮಾಡುವ ಕ್ಷೇತ್ರ ಅದಾಗಿತ್ತು. ಶುಶ್ರೂಷೆ ಹೇಗಿರಬೇಕು ಎಂಬ ಶಿಸ್ತು, ಸ್ವಚ್ಛತೆ, ಶುದ್ಧಗಾಳಿಯ ಅಗತ್ಯದ ಪರಿಕಲ್ಪನೆಯೂ ಆಗ ಇರಲಿಲ್ಲ. ಯುದ್ಧಕಾಲದ ಗಡಿಬಿಡಿಯಲ್ಲಿ ಇದನ್ನೆಲ್ಲ ಗಮನಿಸಲು ಪುರುಸೊತ್ತಾದರೂ ಯಾರಿಗಿತ್ತು? ಇಂಥ ಮಾನವೀಯ ಬಿಕ್ಕಟ್ಟುಗಳೇ ನರ್ಸಿಂಗ್